# ಜಿಂಕೆಗಳ ಜೀವರಕ್ಷಕ



■ ಪ್ರವೀಣ ಕುಲಕರ್ಣಿ

ಪರಿಸರದ ಕುರಿತು, ವನ್ಯಜೀವಿಗಳ ಕುರಿತು ನಾವು–ನೀವೆಲ್ಲ ಕಳಕಳಿ ವ್ಯಕ್ತಪಡಿಸುತ್ತೇವೆ. ಎಲ್ಲಿಯಾದರೂ ವನ್ಯಜೀವಿಯೊಂದು ಮಾನವನ ಕಾರಣದಿಂದಾಗಿ ಸಾವನ್ನಪ್ಪಿದರೆ ಮರುಗುತ್ತೇವೆ. ಪ್ರಾಯಶಃ ನಮ್ಮ ಕಾಳಜಿ ಅಷ್ಟಕ್ಕೇ ಸೀಮಿತವಾಗಿ ಬಿಡುತ್ತದೆ. ಬೆಲ್ಜಿಯಂನಲ್ಲಿ ಒಬ್ಬ ವ್ಯಕ್ತಿ ಇದ್ದಾರೆ. ಜಮೀನುಗಳಲ್ಲಿ ದೈತ್ಯಾಕಾರವಾಗಿ ಬೆಳೆದು ನಿಂತ ಹುಲ್ಲಿನಲ್ಲಿ ಸಿಲುಕಿಕೊಂಡು ಬೃಹತ್ ಯಂತ್ರಗಳ ಒಡಲಿಗೆ ಆಹಾರವಾಗುತ್ತಿದ್ದ ನೂರಾರು ಜಿಂಕೆಗಳನ್ನು ಅವರು ಉಳಿಸಿದ್ದಾರೆ. ಜಿಂಕೆಗಳನ್ನು ಸಂರಕ್ಷಿಸುವ ಉದ್ದೇಶಕ್ಕಾಗಿ ಅವರು 'ಸೇವಿಂಗ್ ಬಾಂಬಿ' (ಬಾಂಬಿ ಎನ್ನುವುದು ಯೂರೋಪಿನ ತಳಿಯ ಜಿಂಕೆ) ಎಂಬ ಆಂದೋಲನವನ್ನೇ ಅವರು ರೂಪಿಸಿದ್ದಾರೆ. ಸ್ವಯಂಸೇವಕರ ದೊಡ್ಡದೊಂದು ಪಡೆಯನ್ನೇ ಅವರು ಕಟ್ಟಿದ್ದಾರೆ. ಅಂದಹಾಗೆ, ಅವರ ಹೆಸರು ಸೆಡ್ರಿಕ್ ಪ್ಯಾಟಿಟ್ ಎಂದು.

ಸೆಡ್ರಿಕ್ ಅವರ ಕಾರ್ಯಾಚರಣೆ ತೀರಾ ಸರಳವಾಗಿದೆ. ಬೆಲ್ಜಿಯಂ ದೇಶದ ಗ್ರಾಮಾಂತರ ಭಾಗಗಳ ಗದ್ದೆಗಳಲ್ಲಿ ದಟ್ಟವಾಗಿ ಬೆಳೆದುನಿಂತ ಬೆಳೆಯ ಮೇಲೆ ಅವರು ಡ್ರೋನ್ ಹಾರಿಸುತ್ತಾರೆ. 8–10 ಅಡಿ ಎತ್ತರಕ್ಕೆ ಬೆಳೆದು ನಿಂತ ಹುಲ್ಲಿನ ಮಧ್ಯದಲ್ಲಿ ಎಲ್ಲೋ ಆಶ್ರಯ ಪಡೆದ ಜಿಂಕೆ ಮರಿ ಅವರ ಡ್ರೋನ್ ಕಂಟ್ರೋಲ್ ಸ್ಕ್ರೀನ್ ಮೇಲೆ ಕಾಣಿಸಿಕೊಳ್ಳುವುದೇ ತಡ, ಸೀದಾ ಆ ಜಾಗವನ್ನು ನಿಖರವಾಗಿ ಗುರ್ತಿಸಿಕೊಂಡು, ಅದರ ರಕ್ಷಣೆಗೆ ಧಾವಿಸುತ್ತಾರೆ. ಹೀಗೆ ಸೆಡ್ರಿಕ್ ಮತ್ತು ಅವರ ತಂಡ ಇದುವರೆಗೆ ಸಂರಕ್ಷಿಸಿರುವ ಜಿಂಕೆ ಮರಿಗಳ ಸಂಖ್ಯೆ 800ಕ್ಕೂ ಹೆಚ್ಚಿದೆ.

ಸೆಡ್ರಿಕ್ ಅವರಿಗೆ ಈಗಷ್ಟೇ 40ರ ಹರೆಯ. ನಾಲ್ಕು ವರ್ಷಗಳಿಂದಲೂ ಅವರು ಜಿಂಕೆ ಮರಿಗಳ ಸಂರಕ್ಷಣೆಯಲ್ಲಿ ತೊಡಗಿದ್ದಾರೆ. ತಮ್ಮ ಹೊಲ–ಗದ್ದೆಗಳಲ್ಲಿ ಬೆಳೆದು ನಿಂತ ಬೆಳೆಯನ್ನು ಕಟಾವು ಮಾಡಲು, ರೆಂಟೆ ಹೊಡೆದು ಹಸನು ಮಾಡಲು ಬೆಲ್ಜಿಯಂ ರೈತರು ದೈತ್ಯಾಕಾರದ ಯಂತ್ರಗಳನ್ನು ಬಳಸುತ್ತಾರೆ. ಗದ್ದೆಗಳ ಹುಲ್ಲಿನ ಅಡಿಯಲ್ಲಿ ಆಶ್ರಯ ಪಡೆದ ಜಿಂಕೆ ಮರಿಗಳು ಇಂತಹ ಯಂತ್ರಗಳ ಬಾಯಿಗೆ ಬಿದ್ದು ಜೀವ ಬಿಡುವುದು ಮಾಮೂಲಾಗಿತ್ತು. ಹೀಗೆ ಜೀವ ಕಳೆದುಕೊಳ್ಳುವ ಜಿಂಕೆಗಳ ಸಂಖ್ಯೆ ಸಾವಿರದ ಗಡಿ ದಾಟಿದಾಗ ಆ ದೇಶದಲ್ಲಿ ದೊಡ್ಡ ಹುಯಿಲು ಎದ್ದಿತ್ತು. ಜಿಂಕೆಗಳ ಸಂರಕ್ಷಣೆ ಮಾಡುವಂತೆ ಪರಿಸರಪ್ರಿಯರು ಸರ್ಕಾರಕ್ಕೂ ಮೊರೆ ಹೋಗಿದ್ದರು. ಆದರೆ, ಸೆಡ್ರಿಕ್, ಸರ್ಕಾರ ಏನೋ ಮಾಡುತ್ತದೆ ಎಂದು ಕೈಕಟ್ಟಿ ಕೂರಲಿಲ್ಲ. ಡ್ರೋನ್ ಹಿಡಿದು ಗದ್ದೆಗೆ ಇಳಿದೇಬಿಟ್ಟರು. ಡ್ರೋನ್ ಮೂಲಕ ಜಿಂಕೆ ಮರಿಗಳು ಎಲ್ಲೆಲ್ಲಿ ಇವೆ ಎಂದು ಪತ್ತೆ ಹಚ್ಚುವುದು, ಅಪಾಯಕಾರಿ ಸ್ಥಳಗಳಿಂದ ಅವುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವುದು – ಈ ಎರಡೂ ಕೆಲಸಗಳನ್ನು ಅತ್ಯಂತ ಜತನದಿಂದ ಮಾಡುತ್ತಾ ಬಂದರು.

ಸೆಡ್ರಿಕ್ ಸಹ ರೈತ ಕುಟುಂಬದ ಹಿನ್ನೆಲೆ ಹೊಂದಿದವರು. ಕೃಷಿಕರ ಸಂಕಷ್ಟವನ್ನೂ ಕೃಷಿಭೂಮಿಯಲ್ಲಿ ವನ್ಯಜೀವಿಗಳು ಎದುರಿಸುವ ಸಂಘರ್ಷವನ್ನೂ ನೋಡುತ್ತಲೇ ಬೆಳೆದವರು. ಮಾನವ–ಪ್ರಾಣಿ ಸಂಘರ್ಷವನ್ನು ತಪ್ಪಿಸಬೇಕು. ವನ್ಯಜೀವಿ ಸಂತತಿಗಳನ್ನು ಉಳಿಸಬೇಕು ಎಂದು ಪ್ರತಿಪಾದಿಸುತ್ತಲೇ ಬಂದವರು. ಕಳೆದ ಒಂದೇ ವರ್ಷದಲ್ಲಿ ಸೆಡ್ರಿಕ್ ಅವರ ತಂಡ 353 ಜಿಂಕೆ ಮರಿಗಳನ್ನು ಸಂರಕ್ಷಿಸಿದೆ. ಅಷ್ಟರಮಟ್ಟಿಗೆ ಈ ರೈತ ಯುವಕನಿಗೆ ಸಾರ್ಥಕಭಾವ. ಸೆಡ್ರಿಕ್ ಅವರ ಈ ಕಾಯಕ ಯೂರೋಪಿನಾದ್ಯಂತ ಎಂತಹ ಸಂಚಲನ ಉಂಟು ಮಾಡಿದೆ ಎಂದರೆ ಸ್ವಿಟ್ಜರ್ಲೆಂಡ್, ಜರ್ಮನಿ ಸೇರಿದಂತೆ ಅಕ್ಕಪಕ್ಕದ ಕೆಲವು ದೇಶಗಳಲ್ಲೂ ವನ್ಯಜೀವಿಗಳ ಸಂರಕ್ಷಣೆಗೆ ತಂಡಗಳು ಹುಟ್ಟಿಕೊಂಡಿವೆ. ಬೆಲ್ಜಿಯಂ ದೇಶದಲ್ಲೇ ಈ ವ್ಯಕ್ತಿಯ ಯಶಸ್ಸಿನ ಕಥೆ ಹೇಳುವುದಾದರೆ ಸರಾಸರಿ 80 ಸ್ವಯಂಸೇವಕರು ತಮ್ಮ ಉದ್ಯೋಗದಿಂದ ಬಿಡುವು ಮಾಡಿಕೊಂಡು, ಡ್ರೋನ್ ಹಿಡಿದುಕೊಂಡು ಕೃಷಿಭೂಮಿಗಳ ಕಡೆಗೆ ಯಾತ್ರೆ ಹೊರಡುತ್ತಾರೆ.

ಸೆಡ್ರಿಕ್ ಮತ್ತು ಅವರ ತಂಡದ ಡ್ರೋನ್‌ಗಳು ನೆಲಮಟ್ಟದಿಂದ 70 ಮೀಟರ್ ಎತ್ತರದವರೆಗೆ ಹಾರಿ, ಎಲ್ಲೆಲ್ಲಿ ವನ್ಯಜೀವಿಗಳ ಕುರುಹುಗಳಿವೆ ಎಂಬುದನ್ನು ತಲಾಷು ಮಾಡುತ್ತವೆ. ನವಜಾತ ಮರಿಗಳಿಗೆ ಓಡಲು ಆಗುವುದಿಲ್ಲ. ಕೆಲವು ಮರಿಗಳಿಗೆ ಎದ್ದು ನಿಲ್ಲುವುದು ಕೂಡ ಕಷ್ಟ. ಅಂತಹ ಮರಿಗಳು ದೈತ್ಯ ಯಂತ್ರಗಳ ಬ್ಲೇಡ್‌ಗಳಿಂದ ಅಪಾಯ ಎದುರಿಸುವ ಮುನ್ನ ಈ ತಂಡ ಅವುಗಳನ್ನು ರಕ್ಷಿಸುತ್ತದೆ. ಮರಿ ಪತ್ತೆಯಾದ ಜಾಗಕ್ಕೆ ಕ್ರೇಟ್ ಹಿಡಿದುಕೊಂಡು ಹೋಗುವ ಸೆಡ್ರಿಕ್, ಅದನ್ನು ನಿಧಾನವಾಗಿ ಎತ್ತಿ ಹಾಕಿಕೊಂಡು, ಪಕ್ಕದ ಅರಣ್ಯದಲ್ಲಿ ತಂದು ಬಿಡುತ್ತಾರೆ. ಕೃಷಿಭೂಮಿಗೆ ಹತ್ತಿರದಲ್ಲೇ ಮರಿ ಬಿಡಾರ ಹೂಡುವುದರಿಂದ ಅದರ ತಾಯಿಗೆ ಅದನ್ನು ಹುಡುಕುವುದು ಕೂಡ ಕಷ್ಟವಾಗುವುದಿಲ್ಲ.

'ಸೇವಿಂಗ್ ಬಾಂಬಿ' ಆಂದೋಲನವು ಹೀಗೆ ಅಪಾಯಕ್ಕೆ ಸಿಲುಕಿದ ಜೀವಿಗಳನ್ನು ರಕ್ಷಿಸುವ ಕೆಲಸವನ್ನಷ್ಟೇ ಮಾಡದೆ, ವಿಷಾಹಾರ ಚೆಲ್ಲಿ ಪ್ರಾಣಿಗಳನ್ನು ಕೊಲ್ಲುವ ರೈತರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನೂ ಮಾಡುತ್ತಿದೆ. ವಿಷವನ್ನು ಹಾಕುವ ಪ್ರಯತ್ನಗಳ ಕುರಿತು ಮಾಹಿತಿ ಬಂದಾಗ, ಹೋಗಿ ಅದನ್ನೆಲ್ಲ ತೆರವುಗೊಳಿಸುವ ಮೂಲಕ ಸಂಭಾವ್ಯ ಅಪಾಯವನ್ನೂ ತಪ್ಪಿಸುತ್ತದೆ. ಸೆಡ್ರಿಕ್ ಅವರ ನಾಲ್ಕು ವರ್ಷಗಳ ಈ ಕಾಯಕವನ್ನು ಅಲ್ಲಿನ ಸರ್ಕಾರವೇನೂ ಗುರ್ತಿಸಿಲ್ಲ. ಯಾವ ಸಂಘಟನೆಯೂ ಅವರಿಗೆ ಹಣಕಾಸಿನ ನೆರವು ನೀಡಲು ಮುಂದಾಗಿಲ್ಲ. ಆದರೆ, ಅಂತಹ ನೆರವು, ಮಾನ್ಯತೆಗೆ ಕಾಯದೆ ಸದ್ದಿಲ್ಲದೆ ತಮ್ಮ ಕೆಲಸ ಮುಂದುವರಿಸಿರುವ ಸೆಡ್ರಿಕ್, ಬೆಳಿಗ್ಗೆ ಎದ್ದೊಡನೆ ಡ್ರೋನ್ ಹಿಡಿದು ಜಿಂಕೆ ಮರಿಗಳ ಬೆನ್ನತ್ತಿ ಹೋಗುತ್ತಾರೆ. ಜಗತ್ತಿನ ಇತರ ಯುವಕರಿಗೂ ಮಾದರಿಯಾಗಿ ನಿಲ್ಲುತ್ತಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65